ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರತದ ಬಗ್ಗೆ

೬೭೯ ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ)— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರತದಿಂದಾಗಿ ಹಾನಿಯಾದುದು ಕರ್ನಾರದ ಗಮನಕ್ಕೆ ಬಂದಿದೆಯೆ (ತಾಲ್ಲೂಕುವಾರು ವಿವರ ನೀಡಬೇಕಾಗಿ ವಿನಂತಿ)

ಆ) ಸಮುದ್ರ ಕೊರತೆಯನ್ನು ತಡೆಗಟ್ಟಲು ೧೯೮೪ ರಿಂದ ಇಲ್ಲಿಯವರೆಗೆ ಸರ್ಕಾರದವರು ವೆಚ್ಚ ಮಾಡಿದ ಹಣ ಎಷ್ಟು ?

ಇ) ವೆಚ್ಚ ಮಾಡಿದ ಹಣದಲ್ಲಿ ಕೇಂದ್ರ ಸರ್ಕಾರದ ಪಾಲೆಷ್ಟು,

ಈ) ರಾಜ್ಯ ಸರ್ಕಾರ ತನ್ನ ವಂತಿಗೆ (ಮ್ಯಾಚಿಂಗ್ ಗ್ರಾಂಟ್) ಕೊಡದೆ ಇದ್ದ ಕಾರಣಕ್ಕಾಗಿ ಕೇಂದ್ರ ಸರ್ಕಾರ ನೀಡಿರುವ ಸಹಾಯಧನ ರದ್ದಾಗಿರುವುದು ನಿಜವೇ ?

ಉ) ಹಾಗಿದ್ದಲ್ಲಿ ಈ ರೀತಿ ರದ್ದಾಗಿರುವ ಹಣ ಎಷ್ಟು ?

ಶ್ರೀ ಹೆಚ್. ಡಿ, ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು

೧) ಹೊನ್ನಾವರ ತಾಲ್ಲೂಕು : ಮಾವಿನಕುರ್ವೆ ಬಳಿ ಸುಮಾರು ೮೦೦ ಮೀ.ಗಳಷ್ಟು ಉದ್ದ

೨) ಅಂಕೋಲಾ ತಾಲ್ಲೂಕು ಮಂಜುಗುಣಿ ಬಳಿ ಸುಮಾರು ೬೦೦ ಮೀ. ಗಳಷ್ಟು ಉದ್ದ

೩) ಕುಮಟಾ ತಾಲ್ಲೂಕು ಆಫನಾಶಿನಿ ಬಳಿ ಸುಮಾರು ೧೦೦೦ ಮೀ. ಗಳಷ್ಟು ಉದ್ದ ಮತ್ತು ಹೊಲನಗದ್ದೆ ಕಡ್ಲೆ ಮಜರೆ ಬಳಿ ಸುಮಾರು ೬೦೦ ಮೀ. ಗಳಷ್ಟು ಉದ್ದ.

೪) ಭಟ್ಕಳ ತಾಲ್ಲೂಕು : ಮಾವಿನಕುರ್ವೆ ಬಳಿ ಸುಮಾರು ೬೦೦ ಮೀ. ಗಳಷ್ಟು ಉದ್ದ.

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ರೂ. ೫೪೪.೫೯ ಲಕ್ಷ.

ಇ) ಏನೂ ಇಲ್ಲ.

ಈ) ಕೇಂದ್ರ ಸರ್ಕಾರ ಈ ಬಗ್ಗೆ ಯಾವ ಸಹಾಯ ಧನವನ್ನು ನೀಡದಿರುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಕೊಪ್ಪದಲ್ಲಿ ಒಂದು ತಾಂತ್ರಿಕ ಕಾಲೇಜನ್ನು ಸರ್ಕಾರದಿಂದ ತೆರೆಯುವ ಬಗ್ಗೆ

೬೬೦ ಶ್ರೀ ಹೆಚ್. ಜಿ. ಗೋವಿಂದೇ ಗೌಡ (ಶೃಂಗೇರಿ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಪ್ಪ, ಶೃಂಗೇರಿ ಹಾಗೂ ನರಸಿಂಹರಾಜಪುರ ತಾಲ್ಲೂಕುಗಳ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪಡೆಯಲು ದೂರದ ಸ್ಥಳಗಳಿಗೆ ಹೋಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಈ ಮೂರು ತಾಲ್ಲೂಕುಗಳಿಗೆ ಮಧ್ಯದಲ್ಲಿರುವ ಕೊಪ್ಪ ಟೌನ್‌ನಲ್ಲಿ ಸರ್ಕಾರದಿಂದ ತಾಂತ್ರಿಕ ಕಾಲೇಜನ್ನು ಪ್ರಾರಂಭಿಸಲು ಯೋಚಿಸಲಾಗಿದೆಯೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮೈಸೂರು ಜಿಲ್ಲಾ ಪರಿಷತ್ತಿನ ಉಪಾಧ್ಯಾಯರುಗಳ ಎರವಲು ಕುರಿತಂ

೩೨೮ ಶ್ರೀ ಜಿ. ರಾಜೂಗೌಡ(ಹನೂರು).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಮೈಸೂರು ಜಿಲ್ಲಾ ಪರಿಷತ್ತು ಈ ವರ್ಷದ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಎಷ್ಟೆಷ್ಟು ಉಪಾಧ್ಯಾಯರನ್ನು ಯಾವ ಯಾವ ತಾಲ್ಲೂಕಿನಿಂದ ಯಾವ ಯಾವ ತಾಲ್ಲೂಕಿಗೆ ಎರವಲು ಕೊಡಲಾಗಿದೆ,

೨) ಒಂದು ಕಡೆಯಿಂದ ಮತ್ತೊಂದು ಕಡೆಗೆ ಎರವಲು ಕೊಡುವಾಗ ಅನುಸರಿಸಬೇಕಾದ ವಂಖ್ಯೆ ಅಂಶಗಳೇನು ?

ಶ್ರೀ ಬಿ. ಸೋಮಂಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

ಒಟ್ಟು ೨೩ ಜನ ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ಎರವಲು ಕೊಡಲಾಗಿದೆ.

ತಾಲ್ಲೂಕುವಾರು ವಿವರಣೆ ಈ ಕೆಳಕಂಡಂತಿದೆ

	ಯಾವ ತಾಲ್ಲೂಕಿನಿಂದ	ಯಾವ ತಾಲ್ಲೂಕಿಗೆ ಶಿಕ್ಷಕರ ಸಂ.	
೧	ಪಿರಿಯಾ ಪಟ್ಟಣ ತಾಲ್ಲೂಕುನಿಂದ	ಹೆಚ್. ಡಿ. ಕೋಟೆಗೆ	೪
೨	ಕೆ. ಆರ್. ನಗರ ತಾಲ್ಲೂಕುನಿಂದ	ಪಿರಿಯಾಪಟ್ಟಣ ತಾಲ್ಲೂಕಿಂಗೆ	೧೧
೩	ಕೊಳ್ಳೇಗಾಲ ತಾಲ್ಲೂಕುನಿಂದ	ಟೀ ನರಸೀಪುರ ತಾಲ್ಲೂಕಿಗೆ	೩
೪	ಚಾಮರಾಜನಗರ ತಾಲ್ಲೂಕುನಿಂದ	ಗುಂಡ್ಲುಪೇಟೆ ತಾಲ್ಲೂಕುಗೆ	೨
೫	ಕೊಳ್ಳೇಗಾಲ ತಾಲ್ಲೂಕುನಿಂದ	ಯಳಂದೂರು ತಾಲ್ಲೂಕುಗೆ	೧
೬	ಹೆಚ್. ಡಿ. ಕೋಟೆ ತಾಲ್ಲೂಕುನಿಂದ	ಪಿರಿಯಾಪಟ್ಟಣ ತಾಲ್ಲೂಕುಗೆ	೧
೭	ಹೆಚ್. ಡಿ. ಕೋಟೆ ತಾಲ್ಲೂಕುನಿಂದ	ಮೈಸೂರು ತಾಲ್ಲೂಕುಗೆ	೧

ಎರವಲು ಕೊಡುವಾಗ ಒಂದು ಶಾಲೆಯು ಮಕ್ಕಳ ಸಂಖ್ಯೆಯು ಅನುಪಾತಕ್ಕನುಗುಣ ಶಿಕ್ಷಕರ ಕೊರತೆ ಕಂಡು ಬಂದಲ್ಲಿ ಅಂತಹ ಶಾಲೆಗೆ ಶಿಕ್ಷಕರನ್ನು ಎರವಲು ಕೊಡಲಾಗುವುದು.

ಗುಲ್ಬರ್ಗಾ ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢಶಾಲೆಗಳ ಬಗ್ಗೆ

೩೩೫. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್) —ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗ ಜಿಲ್ಲೆಯ ಹಾಗರಗುಂಡಗಿ, ಕಿರಣಗಿ, ಮತ್ತು ಹೊಸಗುಂಟಾ ಗ್ರಾಮಗಳಲ್ಲಿ ಮಾಧ್ಯಮಿಕ ತರಗತಿಯು ಸರ್ಕಾರಿ ಶಾಲೆಗಳು ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದರೆ ಸದರಿ ಮಾಧ್ಯಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಪರಿವರ್ತಿಸಲು ಅಲ್ಲಿನ ಶಾಸಕರು ಸುಮಾರು ೩ ವರ್ಷಗಳಿಂದ ಕೋರಿದ್ದಾಗ್ಯೂ ಸಹ ಸರ್ಕಾರದವರು ಕಾರ್ಯಗತ ಮಾಡದೇ ಇರಲು ಕಾರಣಗಳೇನು ?